ಕತ್ತಲಿಗೆ ಕಣ್ಣು ಹೊಂದಿಕೊಂಡ ಮೇಲೆ ಕಾಣುವುದು ದಪ್ಪ ಗೋಡೆಗಳ ಮೈಗೆ ಅಂಟಿಕೊಂಡಂತೆ ಸುತ್ತಲೂ ದಪ್ಪನೆಯ ಮರದ ನಾಗೊಂದಿಗೆಗಳು. ಅವುಗಳ ಮೇಲೆ ಸಾಲಾಗಿ ಜೋಡಿಸಿಟ್ಟ ಕಪ್ಪು ತಗಡಿನ ಬಿಸ್ಕಿಟ್ ಡಬ್ಬಿಗಳು. ಡಬ್ಬಿಯ ಮೇಲೆ ಓರೆಕೋರೆ ಅಕ್ಷರಗಳಲ್ಲಿ ಬಿಳಿಯ ಸೀಮೆಸುಣ್ಣದಿಂದ ಬರೆದ ಬರಹ. ತಿನ್ನುವ ಅಡಿಕೆ, ಬೆಟ್ಟೆ, ಸಕ್ಕರೆ, ತೊಗರಿ ಬೇಳೆ, ಮೆಣಸಿನಕಾಯಿ ಹಳೆಯದು... ಹೊಸದು ಹೀಗೇ ಅಷ್ಟೂ ಡಬ್ಬಿಯ ಮೇಲೆ ಹೆಸರುಗಳು. ಎರಡು ನಾಗೊಂದಿಗೆಗಳ ಮಧ್ಯೆ ಅಡ್ಡ ಹಾಕಿದ ಒಂದು ತೊಲೆಗೆ ಕಟ್ಟಿದ ತೊಟ್ಟಿಲ ಹಗ್ಗ. ಯಾವಾಗ ಬೇಕಾದರೂ ನಾನು ತೊಟ್ಟಿಲು ಕಟ್ಟಲು ಸೈ ಎಂದು ಸಿದ್ಧವಾಗಿರುತ್ತಿತ್ತು. ಆ ತೊಲೆಗೆ ಎರಡು ಕಂಬಳಿ ನೇತಾಡಿಸಿದರೆ ಅಲ್ಲೊಂದು ಬಾಣಂತೀ ಕೋಣೆ ತಯಾರಾಗುತ್ತಿತ್ತು. ಬಾಗಿಲ ಪಕ್ಕದಲ್ಲಿ ವಾಸ್ತುಕಂಬ. ಅದರ ಮೇಲೆ ಗೋಡೆಗೆ ತೂಗುಹಾಕಿದ ದೇವರ ಪಟದ ಮುಂದೆ ಸದಾ ಉರಿಯುವ ಎಣ್ಣೆ ದೀಪದ ಮಂದ ಬೆಳಕಿನಲ್ಲಿ ಮುಂದೆ ಮಸುಕಾಗಿ ಕಾಣುವ ಮೆಟ್ಟಿಲು ದಾಟಿ ಧಡ್ಡನೆ ಒಂದು ಹೆಜ್ಜೆ ಕೆಳಗಿಟ್ಟರೆ ಸಿಗುವುದೇ ಚೌಕಿ ಎಂದು ಕರೆಯುವ ದೊಡ್ಡದಾದ ಒಳ. ಕತ್ತಲು ಇಲ್ಲಿಯೂ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದ್ದರೂ ಒಂದು ತುದಿಯಲ್ಲಿ ಇದ್ದ ದೇವರ ಗೂಡಿನ ಮುಂದಿರುವ ನಂದಾದೀಪ ಕತ್ತಲೆಯನ್ನು ಕಡಿಮೆ ಮಾಡಲು ಹೆಣಗುತ್ತಿರುತ್ತಿತ್ತು. ಆದರೆ, ಆ ಅರೆಬರೆ ಬೆಳಕಿನಲ್ಲಿ ಮತ್ತೆ ಸುತ್ತಲೂ ಇದ್ದ ನಾಗೊಂದಿಗೆಗಳು... ಮುಂಡಿಗೆ ಕಂಬಗಳು ನೆರಳು ಬೆಳಕಿನಾಟ ಆಡುತ್ತಾ ಮತ್ತಷ್ಟು ದಿಗಿಲು ಹುಟ್ಟಿಸುತ್ತಿದ್ದವು. ಅಲ್ಲಿಂದ ಮತ್ತೊಂದು ತುದಿಯಲ್ಲಿದ್ದ ಸದಾ ತೆರೆದೇ ಇರುತ್ತಿದ್ದ ಬಾಗಿಲು, ಹೊಸಿಲು ದಾಟಿದರೆ ಹಿತ್ತಲಕಡೆ ಎಂದು ಕರೆಯುವ ವಿಶಾಲವಾದ ಊಟದ ಒಳ. ಅದರ ಒಂದು ತುದಿಯಲ್ಲಿ ಅಡಿಗೆಮನೆಯಿದ್ದರೆ ಇನ್ನೊಂದು ತುದಿಯಲ್ಲಿ ಮಣ್ಣಿನ ಕಟ್ಟೆ ಕಟ್ಟಿದ ಬಾವಿ ಅದರಾಚೆ ಬಚ್ಚಲು. ಮತ್ತೆ ಅದರಾಚೆ ಕೊಟ್ಟಿಗೆ... ಪಣತದ ಮನೆ... ಕಟ್ಟಿಗೆಮನೆ... ಹುಲ್ಲಿನ ಮನೆ, ಅದರ ಹಿಂದಿನ ಹಿತ್ತಿಲು ಅಂಗಳ... ಮಲೆನಾಡಿನ ಮನೆಗಳೆಂದರೇ ಹೀಗೆ, ಕೊನೆಯಿಲ್ಲದೇ ಕೋಟೆಯಂತೆ ವಿಸ್ತಾರವಾಗಿ ವಿಸ್ತರಿಸಿಕೊಂಡು ಏನೇನೋ ತುಂಬಿಕೊಂಡಿರುತ್ತವೆ.

ಚೌಕಿಯ ದೇವರ ಗೂಡಿನ ಒಂದು ಪಕ್ಕದಲ್ಲಿ ಮೆತ್ತಿಗೆ ಅಂದರೆ ಉಪ್ಪರಿಗೆಗೆ ಹತ್ತಿ ಹೋಗುವ ಮಣ್ಣಿನ ಮೆಟ್ಟಿಲುಗಳು. ದೀಪ ಹಿಡಿದರೂ ಕಾಣದಂತೆ ಮೆತ್ತಿಕೊಂಡ ಕತ್ತಲಿನಲ್ಲಿ ಅಭ್ಯಾಸ ಬಲದಿಂದ ಅಡ್ಡಾದಿಡ್ಡಿ ಮೆಟ್ಟಿಲುಗಳನ್ನು ಹತ್ತಿ ಮೇಲೆ ಹೋದರೆ ಕತ್ತಲೆಯ ಗುಹೆಗಳಂತಾ ಚೌಕಿಮೆತ್ತು, ನಡುಮನೆ ಮೆತ್ತು. ಜಗುಲಿಮೆತ್ತು ಎಂದೆಲ್ಲಾ ಕರೆಯುವ ಒಳಗಳು. ನಾನು ಹೇಳ ಹೊರಟಿರುವ ಕಪ್ಪಡಿಗೆಮನೆಯ ನೇರ ಮೇಲಕ್ಕಿರುವುದೇ ಹೊಗ್ಗಂಡಿ ಕೋಣೆ. ಅಂದರೆ ಅಡಿಗೆಮನೆಯ ಹೊಗೆ ಮೇಲೇರಿ ಹೋಗಲು ಕಂಡಿ... ಅಥವಾ ಸ್ಥಳಾವಕಾಶ ಬಿಟ್ಟು ಮಾಡಿದ ಕೋಣೆ. ಆದರಿಲ್ಲಿ ಈ ಕಂಡಿಯನ್ನು ಯಾವಾಗಲೋ ಮುಚ್ಚಿ ಅದು ಅಪ್ಪ ಅಮ್ಮ ಮಲಗುವ ಕೋಣೆಯಾಗಿ ಪರಿವರ್ತಿತವಾಗಿತ್ತು. ಮತ್ತೆ ನನ್ನ ನೆನಪಿನ ಕೋಣೆಯಲ್ಲಿ ಇದಕ್ಕೊಂದು ಆಪ್ತಸ್ಥಾನ ಯಾವಾಗಲೂ ಮೀಸಲು! ಮೆತ್ತಿನ ಮೆಟ್ಟಿಲು ಹತ್ತಿದ ಮೇಲೆ, ಮೆತ್ತಿನ ಮೇಲೆ ಮತ್ತೊಂದು ಮೆತ್ತು, ಮೇಲ್ ಮೆತ್ತು. ಈ ಮೇಲ್ ಮೆತ್ತು ಅಂದರೆ, ಉಪಯೋಗಿಸದ, ಕೆಲಸಕ್ಕೆ ಬಾರದ ಹಳೆಯ ವಸ್ತುಗಳನ್ನು ತುಂಬಿಡುವ ಜಾಗ. ಅದರ ಮೇಲೆ ಕೈಗೆ ಸಿಗುವಷ್ಟು ಹತ್ತಿರ ಹಂಚಿನ ಮಾಡು. ಇಡೀ ಮನೆಯಷ್ಟೇ ದೊಡ್ಡದಾದ ಈ ಜಾಗದಲ್ಲಿ ಸದಾ ಇಲಿ ಹೆಗ್ಗಣ, ಬಾವಲಿಗಳದ್ದೇ ಸಾಮ್ರಾಜ್ಯ. ಈ ಮೇಲ್ ಮೆತ್ತು ಹತ್ತಲು ಒಂದು ಕರೀ ಮರದ ದಪ್ಪನೆಯ ನುಣುಪಾದ ಏಣಿ. ಆ ಏಣಿಯ ಪಕ್ಕದಲ್ಲಿ ಒಂದು ಉದ್ದನೆಯ ಮರದ ನಾಗೊಂದಿಗೆ. ಅಂದರೆ ಮರದ ಶೆಲ್ಫ್. ಅದರ ತುಂಬಾ ಕಟ್ಟು ಕಟ್ಟುಗಳಾಗಿ ಜೋಡಿಸಿಟ್ಟ ಹಳೆಯ ಚಂದಮಾಮ, ಕಸ್ತೂರಿ, ಮಲ್ಲಿಗೆ, ಪ್ರಜಾಮತ ಮುಂತಾದ ಪತ್ರಿಕೆಗಳು. ಏಣಿಯ ನುಣುಪಾದ ಮೆಟ್ಟಿಲ ಮೇಲೆ ಕುಳಿತು, ಮೇಲ್ ಮೆತ್ತಿನ ಹಂಚಿನ ಮಧ್ಯ ಹಾಕಿದ್ದ ಮಸುಕು ಗಾಜಿನಿಂದ ತೂರಿ